**ಸಾಕ್ಷಿಗೆ ದಿನಾಂಕಃ 15-06-2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲು ಃ ಶ್ರೀ. ಹೆಚ್ ಆರ್ ಯು ವಕೀಲರಿಂದ ಃ**

7.ನಿಪಿ-4 ರ ಪ್ರಕಾರ ಎಂ ಜಿ ರತ್ನಾಕರ ಹೆಗ್ಗಡೆಯವರು 1 ನೇ ವಾದಿಯಾದ ಪ್ರೇಮಲತಾ ಬಿ ಶೆಟ್ಟಿರವರಿಗೆ ಕ್ರಯ ಪತ್ರವನ್ನು ದಿಃ02-07-1988 ರಂದು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-4 ಕ್ರಯ ಪತ್ರ ಮಾಡಿಕೊಟ್ಟ ಸಮಯದಿಂದ ದಾವಾ ಹೂಡುವ ಸಮಯದ ವರೆಗೂ ಸುಮಾರು 35 ವರ್ಷಗಳ ಕಾಲ ಆಗಿದೆ ಎಂದರೆ ಸರಿ. ಸದರಿ ನಿಪಿ-4 ಕ್ರಯ ಪತ್ರ ಆಗಿ 35 ವರ್ಷಗಳು ಕಳೆದ ಕಾರಣ ಸದರಿ ದಾಖಲೆಯಲ್ಲಿ ತಿದ್ದುಪಡಿ ಕೋರುವ ಹಕ್ಕನ್ನು ನಾನು ಕಳೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನಿಪಿ-4 ರಲ್ಲಿ ಕಾಣಿಸಿದ ಜಾಗದ ವಿಸ್ತೀರ್ಣವು ತಪ್ಪಾಗಿ ನಮೂದಾಗಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ.

8. ಎಂ ಜಿ ರತ್ನಾಕರ ಹೆಗ್ಗಡೆಯವರು 1 ನೇ ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ಸದರಿ ಆಸ್ತಿಯನ್ನು ಶೃಂಗೇರಿ ಗ್ರಾಮದ ಸರ್ವೆ ನಂ. 226 ರಲ್ಲಿ 27 ಗುಂಟೆ ಕೃಷಿ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಸರಿಯಾಗಿ ಮಾಹಿತಿ ಇರುವುದಿಲ್ಲ, ಆದರೆ ಸದರಿ ಆಸ್ತಿಯನ್ನು ನಮಗೆ ಮಾರಾಟ ಮಾಡುವ ಸಮಯದಲ್ಲಿ ಸದರಿ ಆಸ್ತಿಯು ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಆಗಿತ್ತು ಎಂದು ನುಡಿಯುತ್ತಾರೆ. ಸದರಿ ಎಂ ಜಿ ರತ್ನಾಕರ ಹೆಗ್ಗಡೆಯವರು ಮೊದಲಿಗೆ ಶೃಂಗೇರಿ ಗ್ರಾಮದ ಸ.ನಂ. 226 ರಲ್ಲಿ 27 ಗುಂಟೆ ಜಾಗವನ್ನು ಖರೀದಿಸಿ, ನಂತರದಲ್ಲಿ ಶೃಂಗೇರಿ ತಹಸೀಲ್ದಾರ್ ರವರ ಕಛೇರಿ ಆದೇಶ ಸಂಖ್ಯೆ 2/1988-89 ದಿಃ02-07-1988 ರಂದು ಕೃಷಿ ಇಂದ ಕೃಷಿಯೇತರ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ಅನ್ಯಕ್ರಾಂತ ಆದ ನಂತರದಲ್ಲಿ 1 ನೇ ವಾದಿಯವರು ಸದರಿ ಎಂ ಜಿ ರತ್ನಾಕರ ಹೆಗ್ಗಡೆಯವರಿಂದ ನಿವೇಶನ ಸಂಖ್ಯೆ -1 ಅನ್ನು ನಿಪಿ-4 ರ ಪ್ರಕಾರ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-4 ರಲ್ಲಿ ಕಾಣುವ ಆಸ್ತಿಯ ವಿಸ್ತೀರ್ಣ ತಪ್ಪಾಗಿದೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿದ್ದು, ಅದಕ್ಕೆ ಪೂರಕವಾಗಿ ನಾನು ನಿಪಿ-5 ರಂತೆ ನಕ್ಷೆಯನ್ನು ಹಾಜರು ಪಡಿಸಿರುತ್ತೇನೆ. ಸದರಿ ನಿಪಿ -5 ನಕ್ಷೆಯಲ್ಲಿ ನಾನು ಹೇಳಿದಂತೆ ದಾವಾ ಆಸ್ತಿಯ ವಿಸ್ತೀರ್ಣದಲ್ಲಿ ಯಾವುದೇ ತಪ್ಪು ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-5 ಅನ್ಯಕ್ರಾಂತ ನಕ್ಷೆಯಲ್ಲ ಎಂದರೆ ಸರಿ.

9. ಸದರಿ ಎಂ ಜಿ ರತ್ನಾಕರ ಹೆಗ್ಗಡೆಯವರು ಸ.ನಂ.226 ರಲ್ಲಿ 27 ಗುಂಟೆ ಪ್ರದೇಶವನ್ನು ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸುವ ಸಂದರ್ಭದಲ್ಲಿ ತಯಾರಿಸಿದ ನಕ್ಷೆಯ ಪ್ರತಿಯನ್ನು ನಾನು ಪಡೆದಿರುವುದಿಲ್ಲ. ಸದರಿ ಅನ್ಯಕ್ರಾಂತ ನಕ್ಷೆಯನ್ನು ನಾನು ಪಡೆದು ನ್ಯಾಯಾಲಯಕ್ಕೆ ಹಾಜರು ಪಡಿಸಿದರೆ ಮಾತ್ರ ನಿಪಿ-4 ರಲ್ಲಿ ಕಾಣಿಸಿರುವ ಆಸ್ತಿಯ ವಿಸ್ತೀರ್ಣ ತಪ್ಪಾಗಿದೆಯೋ ಅಥವಾ ಸರಿಯಾಗಿದೆಯೋ ಎಂದು ತಿಳಿದು ಬರುತ್ತದೆ ಎಂದರೆ ಸರಿಯಲ್ಲ. ನಾನು ಈ ಹಿಂದೆ 2018 ರಲ್ಲಿ ಮೊದಲ ಬಾರಿಗೆ ನಿಪಿ-4 ರಲ್ಲಿ ವಿಸ್ತೀರ್ಣ ತಪ್ಪಾಗಿದೆ ಎಂದು ಹೇಳಿದ್ದು, ಆ ನಂತರದಲ್ಲಿ ನಿಪಿ -1 ರಂತೆ ದಿಃ 24-01-2019 ರಂದು 1 ನೇ ವಾದಿಯಿಂದ ನನ್ನ ಹೆಸರಿಗೆ ನಿಪಿ-4 ರಲ್ಲಿ ಕಾಣಿಸಿದ ಆಸ್ತಿಯನ್ನು ನಿಪಿ-1 ದಾನ ಪತ್ರದ ಮುಖಾಂತರ ನನ್ನ ಹೆಸರಿಗೆ ವರ್ಗಾಯಿಸಿಕೊಂಡಿರುತ್ತೇನೆ ಎಂದರೆ ಸರಿ. ನಿಪಿ-4 ರಲ್ಲಿ ಇರುವ ಸ್ವತ್ತಿನ ವಿವರಣೆ ಹಾಗೂ ವಿಸ್ತೀರ್ಣವನ್ನು ನಿಪಿ -1 ದಾನ ಪತ್ರದಲ್ಲಿ ಕಾಣಿಸಿರುತ್ತೇನೆ ಎಂದರೆ ಸರಿ.

10.ನಾನು ನನ್ನ ವಾದ ಪತ್ರದಲ್ಲಿ ಹೇಳಿದಂತೆ ದಾವೆ ಹೂಡುವ ಪೂರ್ವದಲ್ಲಿ 1 ನೇ ಮತ್ತು 2 ನೇ ಪ್ರತಿವಾದಿಗಳನ್ನು ಭೇಟಿ ಮಾಡಿ, ನಿಪಿ-4 ರಲ್ಲಿ ಕಾಣಿಸಿರುವ ಸ್ವತ್ತಿನ ವಿವರಣೆ ತಪ್ಪಾಗಿದ್ದು, ಅದನ್ನು ಸರಿ ಮಾಡಿಕೊಡಿ ಎಂದು ಕೇಳಿದ್ದೇನೆ ಮತ್ತು ಆ ಸಂದರ್ಭದಲ್ಲಿ ಅವರು ಸರಿಪಡಿಸಿಕೊಡುವುದಾಗಿ ಒಪ್ಪಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಂತರದಲ್ಲಿ 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ನಾನು ತಿದ್ದು ಪಡಿ ಪತ್ರದ ಕರಡು ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನೊಂದಾಯಿಸಿಕೊಡಲು ಕೇಳಿದಾಗ ಅವರು ತಿರಸ್ಕಾರ ಮಾಡಿರುತ್ತಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ನಿಪಿ-2 ರ ಪ್ರಕಾರ 1 ನೇ ಮತ್ತು 2 ನೇ ಪ್ರತಿವಾದಿಗೆ ತಗಾದೆ ನೋಟೀಸು ನೀಡಿದ್ದು, ಅದು 1 ನೇ ಪ್ರತಿವಾದಿಗೆ ತಲುಪಿದ ನಂತರದಲ್ಲಿ ಅವರು ದಾವಾ ಆಸ್ತಿಯ ಬಗ್ಗೆ ಪ್ರಸ್ತುತ ವಿವಾದವಿದ್ದು, ಅವರ ಪತಿ 1988 ರಲ್ಲಿ ಮಾಡಿಕೊಟ್ಟ ಕ್ರಯ ಪತ್ರವನ್ನು ತಿದ್ದುಪಡಿ ಮಾಡಲು ಅವರಿಗೆ ಅಥವಾ ಅವನ ಮಗನಾದಂತಹ 2 ನೇ ಪ್ರತಿವಾದಿಗೆ ಅಧಿಕಾರ ಇರುವುದಿಲ್ಲ ಎಂದು ನನ್ನ ವಕೀಲರಿಗೆ ಅವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ 1 ನೇ ಪ್ರತಿವಾದಿ ನನ್ನ ವಕೀಲರಿಗೆ ತಿಳಿಸಿದ್ದರೂ ಸಹ, ಸುಳ್ಳು ವಾದ ಕಾರಣವನ್ನು ಸೃಷ್ಟಿಸಿ 1 ಮತ್ತು 2 ನೇ ಪ್ರತಿವಾದಿಗಳ ವಿರುದ್ಧ ಈ ಸುಳ್ಳು ದಾವೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

11. ನಿಪಿ-4 ರಲ್ಲಿ ಇರುವಂತಹ ಆಸ್ತಿಯ ವಿಸ್ತೀರ್ಣವನ್ನೇ ತೋರಿಸಿ ನಾನು ಈ ಹಿಂದೇ ಇದೇ ನ್ಯಾಯಾಲಯದಲ್ಲಿ ಓ.ಎಸ್-6/2010 ರ ಪ್ರಕಾರ ಸಂತೋಷ್ ಕುಮಾರ್ ಯಾನೆ ರಾಜೇಂದ್ರ ಎನ್ನುವವರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆಯನ್ನು ಹೂಡಿದ್ದೆ ಎಂದರೆ ಸರಿ. ಸದರಿ ರಾಜೇಂದ್ರ ರವರು ಓ.ಎಸ್ 6/2010 ರಲ್ಲಿ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ನಾನು ತೋರಿಸಿದಂತಹ ದಾವಾ ಆಸ್ತಿಯ ಒಳಗೆ ಅವರಿಗೆ ಸೇರಿದ ಅವರ ಕುಟುಂಬದಲ್ಲಿ ಭಾಗವಾಗಿ ಹಿಸ್ಸೆ ಮುಖಾಂತರ ಬಂದಂತಹ ಆಸ್ತಿಯು ಸಹ ಸೇರಿಕೊಂಡಿರುತ್ತದೆ ಎಂದು ಹೇಳಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಸಂತೋಷ್ ಕುಮಾರ್ ಯಾನೆ ರಾಜೇಂದ್ರ ರವರು 2010 ನೇ ಇಸವಿಯಲ್ಲಿ ಅವರ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. 2010 ರಿಂದ 2014 ನವೆಂಬರ್ ವರೆಗೂ ಎಂ ಜಿ ರತ್ನಾಕರ್ ಹೆಗ್ಗಡೆಯವರು ಬದುಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನುಎಂ ಜಿ ರತ್ನಾಕರ್ ಹೆಗ್ಗಡೆಯವರನ್ನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬೇಕೆಂದು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ಎಂ ಜಿ ರತ್ನಾಕರ್ ಹೆಗ್ಗಡೆಯವರ ಆರೋಗ್ಯ ಆ ಸಮಯದಲ್ಲಿ ಬಹಳ ಹಾಳಾಗಿದ್ದ ಕಾರಣ ನಾನು ಅವರನ್ನು ಸದರಿ ದಾವೆಯಲ್ಲಿ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

12. ಎಂ ಜಿ ರತ್ನಾಕರ್ ಹೆಗ್ಗಡೆಯವರು ದಿಃ24-11-2014 ರಂದು ಹೃದಯಾಘಾತದಿಂದ ತೀರಿಕೊಂಡ ವಿಚಾರ ನನಗೆ ತಿಳಿದಿರುವುದಿಲ್ಲ. ನಾನು ಹೇಳಿದಂತೆ ಸದರಿ ಎಂ ಜಿ ರತ್ನಾಕರ್ ಹೆಗ್ಗಡೆಯವರು ಅನಾರೋಗ್ಯಪೀಡಿತರಾಗಿರಲಿಲ್ಲ, ಆರೋಗ್ಯವಂತರೇ ಆಗಿದ್ದು, ಅಂತಿಮವಾಗಿ ಹೃದಯಾಘಾತ ಕಾರಣದಿಂದ 2014 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಕಾಣಿಸಿರುವ ಆಸ್ತಿಯು 1988 ರಲ್ಲಾಗಲೀ ಅಥವಾ ಪ್ರಸ್ತುತದಲ್ಲಾಗಲೀ ಭೌತಿಕವಾಗಿ ಯಾವ ರೀತಿ ಇದೆ ಎಂದು 1 ನೇ ಅಥವಾ 2 ನೇ ಪ್ರತಿವಾದಿಗಾಗಲೀ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಕಾಣಿಸಿರುವ ಆಸ್ತಿಯ ವಿವರಣೆ ಹಾಗೂ ವಿಸ್ತೀರ್ಣವನ್ನೇ ತೋರಿಸಿ ನಾನು ಓ ಎಸ್ 6/2010 ರಂತೆ ನ್ಯಾಯಾಲಯಕ್ಕೆ ದಾವೆ ಹೂಡಿದ್ದು, ಸದರಿ ದಾವೆಯ ಮೇಲ್ಮನವಿ ಈಗ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ, ನ್ಯಾಯಾಲಯ ಎನ್ ಆರ್ ಪುರದಲ್ಲಿ ಆರ್.ಎ ನಂಬರ್ 17/2019 ರ ಪ್ರಕಾರ ಇನ್ನೂ ಸಹ -

ಚಾಲ್ತಿಯಲ್ಲಿರುವ ಕಾರಣ 1 ನೇ ಮತ್ತು 2 ನೇ ಪ್ರತಿವಾದಿಗಳಿಗೆ ನಾನು ಪ್ರಸ್ತುತ ದಾವೆಯಲ್ಲಿ ಕೋರಿದಂತೆ ವಿಸ್ತೀರ್ಣವನ್ನು ಬದಲಾಯಿಸಿಕೊಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳೂ ನನಗೆ ಗೊತ್ತಿದ್ದರೂ ಸಹ, ಸುಳ್ಳು ದಾವಾ ಕಾರಣವನ್ನು ಸೃಷ್ಟಿಸಿ ಈ ಸುಳ್ಳು ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸುಳ್ಳು ದಾವೆಗೆ ಪೂರಕವಾಗಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಪ್ರಸ್ತುತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 15-06-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ**